| | | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನಗಳು | ಕಲಿಕೆಯ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನಗಳು | ಕಲಿಕೆಯ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ<br>ಹಾವಿನ ಹಾಡು | ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು | ಅಭಿನಯ ಗೀತೆ ಚಾರ್ಟ್<br>ಪದ್ಯಪುಸ್ತಕ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ</u>**<br>ಚುಕ್‌ಬುಕ್ ರೈಲು ಬಂತು, ಅಭಿನಯ ಗೀತೆಯನ್ನು ಹಾಡಿಸುವರು. | ಕನ್ನಡ ಗಗನ ನಡಿ | * ಬೇರೆ ಮಕ್ಕಳ ಬರವಣಿಗೆಯನ್ನು ಓದುವರು.<br>* ಓದು ಸರಳ ಪಾಠವನ್ನು ಓದಿದ ಮೇಲೆ ಯಾರು ಯಾವಾಗ ಎಲ್ಲಿ ಮತ್ತು ಏನು ಪ್ರಶ್ನೆಗಳಿಗೆ ಉತ್ತರಿಸಲು ಸಮರ್ಥರಾಗುವರು. | ಅಭಿನಯ ಗೀತೆ ಚಾರ್ಟ್<br>ಕಥೆ ಮತ್ತು ಪ್ರಶ್ನೆ ಚಾರ್ಟ್<br>ಕಥೆಗಳ ಸಂಗ್ರಹ | ಶಿಕ್ಷಕ | **<u>ಪೂರ್ವಭಾವಿ ಚಟುವಟಿಕೆ</u>**<br>ಚುಕ್‌ಬುಕ್ ರೈಲು ಬಂತು, ಅಭಿನಯ ಗೀತೆಯನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ನೇರ ಬೋಧನೆಗೆ ಅಣಿಯಾಗಲು ಸೂಚಿಸುವರು. | | | | | ಕೊಟ್ಟಿರುವ ಕಥೆಯನ್ನು ಓದಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ಸೂಚಿಸುವರು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ</u>**<br>ಶಿಕ್ಷಕರು ಮಕ್ಕಳಿಂದ ಹಾವಿನ ಹಾಡನ್ನು ಹಲವಾರು ಸಲ ಪುನರಾವರ್ತಿಸಿ ಸಾಮೂಹಿಕವಾಗಿ ಹಾಡಿಸುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಕಥೆಯನ್ನು ಓದಿ ಪ್ರಶ್ನೆಗೆ ಉತ್ತರಿಸುವರು. |
| | 10 ನಿ | | | | | ಹಿರೇಮಣಿ ನೇತೃತ್ವದಲ್ಲಿ ಸಾಮೂಹಿಕವಾಗಿ ಮತ್ತು ವೈಯಕ್ತಿಕವಾಗಿ ಹಾಡಲು ತಿಳಿಸುವರು. | | | | | ಶಿಕ್ಷಕರು ಪರಿಶೀಲನೆ ಮಾಡುವರು. |
| | 25 ನಿ | | | | ಶಿಕ್ಷಕ | ಹಿರೇಮಣಿ ನೇತೃತ್ವದಲ್ಲಿ ಮಕ್ಕಳು ಸಾಮೂಹಿಕವಾಗಿ ಹಾಡುವರು. ಸಾಮೂಹಿಕವಾಗಿ ಹಾಡಲು ಬಂದ ನಂತರ ವೈಯಕ್ತಿಕವಾಗಿ ಹಾಡಿಸುವರು. | | | | ಶಿಕ್ಷಕ | **<u>ಮೌಲ್ಯಮಾಪನ ಚಟುವಟಿಕೆ</u>** : ಶಿಕ್ಷಕರು ಕಥೆಯನ್ನು ಹೇಳಿ, ಅದಕ್ಕೆ ಸಂಬಂಧಿಸಿದಂತೆ ಪ್ರಶ್ನೆಗೆ ಮಕ್ಕಳಿಂದ ಉತ್ತರವನ್ನು ಕೇಳಿ ಪಡೆಯುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು. |
| 2ನೇ | 10 ನಿ | ಗಣಿತ<br>ಸಂಖ್ಯೆಗಳು | ಎಣಿಸುವ ಮೂಲಕ ಸರಿ ಸಂಖ್ಯೆ ಬೆಸ ಸಂಖ್ಯೆಗಳನ್ನು ಅರ್ಥಮಾಡಿಕೊಳ್ಳುವರು | ಹಳಗುಣಿಮಣೆ, ಹುಣಸೆಬೀಜ, ಕಡ್ಡಿಗಳು, ಕಲ್ಲು, ಹಲಗೆ, ಮಣ್ಣು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ</u>** : ಮಕ್ಕಳನ್ನು ವೃತ್ತಾಕಾರವಾಗಿ ಸುತ್ತುವಂತೆ ಹೇಳುವುದು. ಶಿಕ್ಷಕರು ಹೇಳಿದ ಸಂಖ್ಯೆಯಲ್ಲಿ ಗುಂಪಾಗುವಂತೆ ಸೂಚಿಸುವರು. ಈ ರೀತಿ ಆಟ ಮುಂದುವರಿಸುವುದು. ಗುಂಪು ಸಿಗದ ಮಗು ಹೊರಗೆ ಹೋಗುವರು. | ಗಣಿತ ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ದಶಕವಿಲ್ಲದ ಹಾಗೂ ದಶಕವಿರುವ ಹಾಗೆ ಮೂರು ಅಂಕಿಗಳನ್ನು ಅಥವಾ ಮೂರು ಸಂಖ್ಯೆಗಳ ಸಂಕಲನಮಾಡುವರು.<br>* ನಿತ್ಯ ಜೀವನದ ಸರಳ, ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಹಳಗುಣಿಮಣೆ, ಹುಣಸೆಬೀಜ, ಕಡ್ಡಿಗಳು, ಕಲ್ಲು, ಹಲಗೆ, ಮಣ್ಣು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ</u>** : ಎರಡನೆಯ ತರಗತಿ ಮಕ್ಕಳ ಜೊತೆಯಲ್ಲಿಯೇ ಚಟುವಟಿಕೆಯಲ್ಲಿ ಸೇರಿಸಿಕೊಳ್ಳುವರು. |
| | 5 ನಿ | | | | | ಕ್ಯಾಲೆಂಡರ್ ಬಳಸಿ ಹಿಂದಿನ ದಿನ ಮತ್ತು ಮುಂದಿನ ದಿನ ಬಗ್ಗೆ ಪ್ರಶ್ನಿಸುವ ಚಟುವಟಿಕೆ ಮಾಡಿಸಲು ಸೂಚಿಸುವರು. | | | | | ಮುಂದಿನ ಚಟುವಟಿಕೆಗೆ ಮಕ್ಕಳು ಸಿದ್ಧರಾಗುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಮಕ್ಕಳು ಚಟುವಟಿಕೆಯನ್ನು ಮಾಡುವರು | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ</u>** ಸ್ಥಾನಬೆಲೆ ಪಟ್ಟಿಯನ್ನು ಬರೆದು ಸಂಖ್ಯೆಗಳನ್ನು ಸ್ಥಾನಬೆಲೆಗೆ ಅನುಗುಣವಾಗಿ ಸಂಕಲನ ಮಾಡುವ ಚಟುವಟಿಕೆ ಮಾಡಿಸುವರು.<br>ನೂರು / ಹತ್ತು / ಬಿಡಿ<br>3 / 4 / 5<br>4 / 8 / 6<br>8 / 3 / 1<br>ಈ ಕ್ರಮವನ್ನು ಅನುಸರಿಸಿ ವಿವರಣಾತ್ಮಕ ಲೆಕ್ಕ ಮಾಡಿ ತೋರಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಸಂಕಲನದ ಲೆಕ್ಕಗಳನ್ನು ಮಾಡಲು ಸೂಚಿಸುವರು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ</u>** ಮಕ್ಕಳಿಗೆ ಹಳಿಗುಣಿ ಮಣೆ ಕೊಟ್ಟು ಸ್ವಲ್ಪ ಹುಣಸೆ ಬೀಜಗಳನ್ನು ಕೊಟ್ಟು ಅವುಗಳನ್ನು ಮೊದಲು ಎಣಿಸಲು ಹೇಳುವರು. ನಂತರ ಆ ಬೀಜಗಳನ್ನು ಎರಡೆರಡರಂತೆ ಒಂದೊಂದು ಗುಳಿಯಲ್ಲಿ ಹಾಕಲು ಹೇಳುವರು. ಕೊನೆಯಲ್ಲಿ ಬೀಜ ಉಳಿದರೆ ಅದು ಬೆಸಸಂಖ್ಯೆ ಎಂತಲೂ ಒಂದೂ ಬೀಜ ಉಳಿಯದಿದ್ದರೆ ಆ ಸಂಖ್ಯೆ ಸರಿಸಂಖ್ಯೆ ಎಂದು ಹೇಳುವುದು ಈ ರೀತಿ ಚಟುವಟಿಕೆಯನ್ನು ಮುಂದುವರಿಸುವರು. | | | | ಹಿರೇಮಣಿ | ಸಂಕಲನದ ಸಮಸ್ಯೆಗಳನ್ನು ಬಿಡಿಸುವ ಲೆಕ್ಕಗಳನ್ನು ಕೊಟ್ಟು ಲೆಕ್ಕ ಮಾಡಿಸುವರು. |
| | 5 ನಿ | | | | | ಮುಂದಿನ ಕಾರ್ಯ ಹಂಚಿಕೆ ಮಾಡುವರು. | | | | | ಶಿ ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕೆಯ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕೆಯ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಜೀವನ ವಿಜ್ಞಾನ ಆರೋಗ್ಯ ಶಿಕ್ಷಣ | ಔಪಚಾರಿಕ ವ್ಯಾಯಾಮಗಳ ಮೂಲಕ ಕೈ ಕಾಲುಗಳಿಗೆ ವ್ಯಾಯಾಮ ನೀಡುವುದು | | ಶಿಕ್ಷಕ | **ಔಪಚಾರಿಕ ಚಟುವಟಿಕೆಗಳು**<br>**ಅಭ್ಯಾಸ -1**<br>**ಕೈಗಳಿಗೆ** (ಒಂದು ಪಾದವನ್ನು ಮುಂದಕ್ಕಿಡಿ. ಆಜ್ಞೆ ಕೊಟ್ಟ ಕೂಡಲೇ ಒಂದು ಕೈಯನ್ನು ಹಿಂದಕ್ಕೂ ಮುಂದಕ್ಕೂ ವೃತ್ತಾಕಾರವಾಗಿ ಆಡಿಸುವರು.<br>**ಸೊಂಟಕ್ಕೆ** ದೈತ್ಯನಂತೆ ಎತ್ತರವಾಗುವುದು, ಕುಳ್ಳನಂತೆ ಗಿಡ್ಡನಾಗುವರು.<br>**ಕಾಲುಗಳಿಗೆ** ಮೊಣಕಾಲುಗಳನ್ನು ಎತ್ತರಕ್ಕೆ ಎತ್ತುತ್ತಾ ನಿಂತ ಸ್ಥಳದಲ್ಲಿಯೇ ಓಡುವರು.<br>**ವಿಶ್ರಾಂತಿ** 10 ನಿಮಿಷಗಳನ್ನು ಮೀಸಲಿಡುವರು. | ಜೀವನ ವಿಜ್ಞಾನ ಆರೋಗ್ಯ ಶಿಕ್ಷಣ | ಔಪಚಾರಿಕ ವ್ಯಾಯಾಮಗಳ ಮೂಲಕ ಕೈ ಕಾಲುಗಳಿಗೆ ವ್ಯಾಯಾಮ ನೀಡುವುದು | | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ಈ ಔಪಚಾರಿಕ ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿ | ಚಿನ್ನರ-ಚುಕ್ಕಿ | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ಚಿನ್ನರ-ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ರೇಡಿಯೋ ಕಾರ್ಯಕ್ರಮದಲ್ಲಿ ತೊಡಗಿಸುವರು. |
| 4ನೇ | 10 ನಿ | ಪ.ಅ.<br>ಪರಿಸರ ಅಧ್ಯಯನ<br>ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವುದು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ದೇಹದ ಭಾಗಗಳ ಚಿತ್ರಪಟ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ**<br>ಹೆಬ್ಬೆರಳ ತೋರ್‌ಬೆರಳ್ ಸೇರಿಕೊಂಡು ಕುಣಿಯುತ್ತಿತ್ತ ತೈಯತಕ್ಕ, ತಕ್ಕ ತೈಯತಕ್ಕ ಅಭಿನಯ ಗೀತೆಯನ್ನು ಹೇಳಿಕೊಡುವರು. | ನಮ್ಮ ಹಲ್ಲುಗಳು | ವಿವಿಧ ರೀತಿಯ ಹಲ್ಲುಗಳನ್ನು ಗುರ್ತಿಸುವುದು.<br>ಹಲ್ಲುಗಳ ಕಾರ್ಯ, ಸ್ವಚ್ಛತೆ ಮತ್ತು ರಕ್ಷಣೆಯ ವಿಧಗಳನ್ನು ಅರಿಯುವುದು | | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ**<br>2ನೇ ತರಗತಿಯ ವಿದ್ಯಾರ್ಥಿಗಳೊಂದಿಗೆ ಪೂರ್ವ ಸಿದ್ಧತಾ ಚಟುವಟಿಕೆ ಯಲ್ಲಿ ಪಾಲ್ಗೊಳ್ಳುವರು. |
| | 5 ನಿ | | | | | ಮುಂದಿನ ಪಾಠಕ್ಕೆ ಅಣಿಗೊಳಿಸುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | ಮಕ್ಕಳನ್ನು ಶಾಲಾ ಹೊರ ಪರಿಸರಕ್ಕೆ ಕರೆದುಕೊಂಡು ಹೋಗಿ ಕೆಲವು ಕಾಲಿನಿಂದ ಮಾಡುವ ಚಟುವಟಿಕೆ ಮಾಡಿಸುವರು. ನಂತರ ಎಲ್ಲಾ ಮಕ್ಕಳನ್ನು ಅವರು ಮಾಡಿದ ಚಟುವಟಿಕೆಗಳನ್ನು ಚರ್ಚಿಸುತ್ತಾ ಕಾಲಿನ ಭಾಗಗಳನ್ನು ಪರಿಚಯಿಸುವರು. | | | ಬಾಚಿಹಲ್ಲಿನ ಚಿತ್ರಗಳು | ಹಿರೇಮಣಿ | ಬಾಚಿ ಹಲ್ಲಿನ ಚಿತ್ರ ಬರೆಯಲು ಹೇಳುವರು. |
| | 10 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಮಕ್ಕಳನ್ನು ಮುಂದಿನ ಪಾಠಕ್ಕೆ ಅಣಿಗೊಳಿಸುವರು. |
| | 25 ನಿ | | | | ಹಿರೇಮಣಿ | ಕಾಲಿನಿಂದ ಮಾಡುವ ಕಾರ್ಯಗಳನ್ನು ಪಟ್ಟಿ ಮಾಡಲು ಹೇಳುವರು. | | | ಹಲ್ಲಿನ ವಿಧಗಳ ಚಿತ್ರಪಟಗಳು | ಶಿಕ್ಷಕ | ಹಲ್ಲುಗಳಲ್ಲಿ ಎರಡನೇ ವಿಧ ಹಾಗೂ ಮೂರನೇ ವಿಧವನ್ನು ಅವುಗಳ ಕಾರ್ಯಗಳ ಬಗ್ಗೆ ಸರಳವಾಗಿ ಮಕ್ಕಳೊಂದಿಗೆ ಸಂಭಾಷಿಸುತ್ತಾ ಹಲ್ಲಿನ ಕಾರ್ಯವೈಖರಿಯನ್ನು ತಿಳಿಸುವರು. |
| | 5 ನಿ | | | | | ಮಕ್ಕಳು ಮಾಡಿದ ಚಟುವಟಿಕೆಯ ಪರಿಶೀಲನೆ ಮಾಡುವರು. | | | | | ಕೋರೆಹಲ್ಲುಗಳು ಯಾವ ಪ್ರಾಣಿಗಳಲ್ಲಿ ದೊಡ್ಡದಾಗಿ ಹಾಗೂ ಮೊನಚಾಗಿ ಇರುತ್ತದೆ ಎಂದು ಪ್ರಶ್ನಿಸುವರು. |

| ದಿನ | ಸಮಯ ಹಂಚಿಕೆ | ಎರಡನೇ ತರಗತಿ<br>ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ<br>ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 1ನೇ | 10 ನಿ | ಕನ್ನಡ ಹಾವಿನ ಹಾಡು | ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು | ಹಾಡಿನ ಚಾರ್ಟ್ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ** :<br>ಅಂಚೆ ಪತ್ರ ಹಾಡು ದೂರ ದೂರ ಊರಿನಿಂದ ಸುದ್ದಿ ಹೊತ್ತು ತರುವುದು ಮೈಗೆ ಮುದ್ರೆ ಮೆತ್ತಿಕೊಂಡು, ನಮ್ಮ ಮನೆಗೆ ಬರುವರು.<br>ಅಭಿನಯ ಗೀತೆ ಹಾಡಿಸುವರು. | ಕನ್ನಡ ಅಕ್ಷರಗೊಂಡು ಚಿತ್ರ | ಬೇರೆ ಮಕ್ಕಳ ಬರವಣಿಗೆಯನ್ನು ಓದುವುದು | ಹಾಡಿನ ಚಾರ್ಟ್ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ** :<br>ಅಂಚೆ ಪತ್ರ ಹಾಡು<br>2ನೇ ತರಗತಿಯ ಮಕ್ಕಳ ಜೊತೆಯಲ್ಲಿ ಚಟುವಟಿಕೆಗಳನ್ನು ಮಾಡುವರು. |
| | 5 ನಿ | | | | | ಮಕ್ಕಳಿಂದ (ಕೋಟು ಗೀಟು ಹಾಕಿಕೊಂಡು) ಪದ್ಯವನ್ನು ಗುಂಪಿನಿಂದ ಹಾಡಿ, ಒಂಟಿಯಾಗಿ ಹಾಡನ್ನು ಕೇಳಲು ಹಿರೇಮಣಿಗೆ ಸೂಚಿಸುವರು.<br>(ಶಿ. ಕೈ.ಪಿ. ಪು.ಸಂ. 78 ರಲ್ಲಿದೆ) | | | | | ಮುಂದಿನ ಪಾಠಕ್ಕೆ ಅಣಿಗೊಳಿಸುವರು. |
| | 25 ನಿ | | | | ತ | ಹಿರೇಮಣಿ ನೇತೃತ್ವದಲ್ಲಿ ಮಕ್ಕಳು ಕೋಟು ಗೀಟು ಹಾಕಿಕೊಂಡು ಪದ್ಯವನ್ನು ಗುಂಪಿನಿಂದ ಮತ್ತು ಒಂಟಿಯಾಗಿ ಹಾಡುವರು. | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ**<br>ಅಂಚೆ ಕಛೇರಿಯ ಕಾರ್ಯದ ಬಗ್ಗೆ ವಿವರಣೆ ನೀಡುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಶಿಕ್ಷಕರು ಪರಿಶೀಲಿಸುವರು. | | | | | ಕಥೆ ಪುಸ್ತಕಗಳನ್ನು ಓದಲು ತಿಳಿಸುವರು. |
| | 25 ನಿ | | | | ಶಿಕ್ಷಕ | **ಕಲಿಕಾಂಶ** ಹಾವಿನ ಹಾಡು ಪದ್ಯವನ್ನು ರಂಗಕಲೆಯಲ್ಲಿ ತಿಳಿಸಿರುವಂತೆ ಅಭಿನಯ ಪೂರ್ವಕವಾಗಿ, ಮಕ್ಕಳನ್ನು ಬಳಸಿಕೊಂಡು ಮಾಡುವರು.<br>ಎಲ್ಲಾ ಮಕ್ಕಳು ಈ ಅಭಿನಯದಲ್ಲಿ ಪಾಲ್ಗೊಳ್ಳುವಂತೆ ಮಾಡುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆ ಮುಂದುವರಿಸುವರು. |
| | 5 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | ಎಣಿಸುವ ಮೂಲಕ ಸರಿ ಸಂಖ್ಯೆ ಬೆಸ ಸಂಖ್ಯೆಗಳನ್ನು ಅರ್ಥಮಾಡಿಕೊಳ್ಳುವುದು | ಹುಣಸೆಬೀಜ, ಕಡ್ಡಿಗಳು, ಕಲ್ಲುಹಲಗೆ, ಹರಳುಗಳು, ಮಕ್ಕಳ ಪಾಲಿ ಬೆಂಕಿಪೊಟ್ಟಣ, ಫ್ಲಾಶ್‌ಕಾರ್ಡ್, ಕ್ಯಾಲೆಂಡರ್ | | **ಪೂರ್ವ ಸಿದ್ಧತಾ ಚಟುವಟಿಕೆ** ಕೆರೆ ದಡ ಆಟ ಆಡಿಸುವ ರೀತಿಯಲ್ಲಿ ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸುವರು. ಪ್ರತಿ ಮಗುವಿಗೆ ಕ್ರ.ಸಂ. ನೀಡಿ ಶಿಕ್ಷಕರು ಸರಿ ಸಂಖ್ಯೆ ಎಂದು ಹೇಳಿದಾಗ, ಸರಿ ಸಂಖ್ಯೆಯ ವಿದ್ಯಾರ್ಥಿಗಳು ಕುಪ್ಪಳಿಸಿ ಒಂದು ಹೆಜ್ಜೆ ಮುಂದೆ ಬರುವರು. ಸರಿ ಸಂಖ್ಯೆ ಎಂದು ಹೇಳಿದಾಗ ಬೆಸಸಂಖ್ಯೆಯ ಮಗು ಕುಪ್ಪಳಿಸಿದಾಗ ಆ ಮಗುವು (out) ಹೊರಗಡೆ ಹೋಗುತ್ತಾನೆ. ಈ ಆಟವನ್ನು ಮುಂದುವರೆಸುವರು. | ಗಣಿತ ಸಂಕಲನ | * ಮೊತ್ತವು 999ಕ್ಕೆ ಮೀರದಂತೆ ದಶಕವಲ್ಲದ ಹಾಗೂ ದಶಕವಿರುವ ಹಾಗೆ ಮೂರು ಅಂಕಿಗಳುಳ್ಳ ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವುದು.<br>* ನಿತ್ಯ ಜೀವನದ ಸರಳ ಸಂಕಲನದ ಸಮಸ್ಯೆಗಳನ್ನು ಬಿಡಿಸುವುದು | ಕಡ್ಡಿಗಳು, ಗೋಲಿಗಳು, ಕ.ಹ. ಸಂಖ್ಯಾ ಫಲಕಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ** :<br>ಎರಡನೇ ತರಗತಿಯ ಮಕ್ಕಳ ಜೊತೆಯಲ್ಲಿ ಮೂರನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಮಕ್ಕಳು ಮುಂದಿನ ಚಟುವಟಿಕೆಗೆ ಅಣಿಯಾಗುವರು | | | | | ಹಿಂದಿನ ದಿನದ ಲೆಕ್ಕಗಳನ್ನು ಮಾಡಿಸಲು ಹಿರೇಮಣಿಗೆ ಸೂಚಿಸುವರು. |
| | 25 ನಿ | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ**<br>1 2 3 4 5 / 6 7 8 9 10 / 11 12 13 14 15 / 16 17 18 19 20<br>ಚಿತ್ರದಲ್ಲಿರುವಂತೆ ಸಂಖ್ಯೆಗಳನ್ನು ಕ್ಯಾಲೆಂಡರ್ ನಿಂದ ಕತ್ತರಿಸಿ ಖಾಲಿ ಬೆಂಕಿ ಪೊಟ್ಟಣಗಳಿಗೆ ಅಂಟಿಸುವುದು ಬೆಂಕಿ ಪೊಟ್ಟಣಗಳಿಗೆ ಅಂಟಿಸುವರು.<br>ಅಳಗುಣಿ ಮಣೆ ಆಟ ಆಡುವ ಚಟುವಟಿಕೆಯನ್ನು ಬಳಸಿ ಸರಿ ಬೆಸ ಸಂಖ್ಯೆಯನ್ನು ಗುರುತಿಸುವ ಚಟುವಟಿಕೆ ನಿರ್ವಹಿಸಲು ಸೂಚನೆ ನೀಡುವರು. | | | | ಹಿರೇಮಣಿ | ಹಿಂದಿನ ಅವಧಿಯಲ್ಲಿ ಮಾಡಿದ ಚಟುವಟಿಕೆಯನ್ನು ಮುಂದುವರೆಸಿಕೊಂಡು ಹೋಗುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಮುಂದುವರಿಸಲು ಸೂಚನೆ ನೀಡುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. |
| | 25 ನಿ | | | | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಸರಿ, ಬೆಸ ಸಂಖ್ಯೆಗಳನ್ನು ಗುರುತಿಸುವ ಚಟುವಟಿಕೆ ಮಾಡುವರು. | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ**<br>ಪ.ಪು. ಪುಟಸಂಖ್ಯೆ 56 ರಲ್ಲಿರುವ ಅಭ್ಯಾಸದ ಲೆಕ್ಕಗಳನ್ನು ಮಾಡುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲನೆ ಮಾಡುವರು. | | | | | ಮುಂದಿನ ಕಾರ್ಯ ಹಂಚಿಕೆ ಮಾಡುವರು. |

| ಅವಧಿ | ಸಮಯ ನಿಮಿಷ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಸಾಮರ್ಥ್ಯ | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿನ್ಯಾಸ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಸಾಮರ್ಥ್ಯ | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿನ್ಯಾಸ | ಕಲಿಕಾ ಪ್ರಕ್ರಿಯೆ |
| **1** | **2** | **3** | **4** | **5** | **6** | **7** | **8** | **9** | **10** | **11** | **12** |
| 3ನೇ | 40 ನಿ | ನಾ.ಅ.ಅ.ಕ | ಕತ್ತರಿಸಿದ ಚಿತ್ರಗಳನ್ನು ಸರಿಯಾದ ಕ್ರಮವಾಗಿ ಜೋಡಿಸುವರು. | ಚಿತ್ರಗಳು, ಬಣ್ಣದ ಕಾಗದ, ಕತ್ತರಿ, ವೃತ್ತಪತ್ರಿಕೆ, ಅಂಟು | ಪೂರ್ಣ | **ಚಟುವಟಿಕೆ :** ಹಳೆಯ ವೃತ್ತಪತ್ರಿಕೆಗಳಲ್ಲಿ ಇರುವ ಚಿತ್ರಗಳನ್ನು (ಕುರ್ಚಿ, ಮೇಜು, ಎಲೆಹಣ್ಣು, ಪಕ್ಷಿಗಳು) ಕತ್ತರಿಸುವರು. ಇವುಗಳನ್ನು ಒಂದು ಡ್ರಾಯಿಂಗ್ ಹಾಳೆಗೆ ಅಂಟಿಸುವರು. ಇದರಿಂದ ಚಿತ್ರಗಳನ್ನು ಸಂಗ್ರಹಿಸುವ ಹವ್ಯಾಸ ಮಕ್ಕಳಲ್ಲಿ ಬೆಳೆಸುವಂತೆ ಶಿಕ್ಷಕರು ಪ್ರೋತ್ಸಾಹಿಸುವರು. | ಚಿತ್ರಕಲೆ | ಕತ್ತರಿಸಿದ ಚಿತ್ರಗಳನ್ನು ಸರಿಯಾದ ಕ್ರಮವಾಗಿ ಜೋಡಿಸುವರು. | ಚಿತ್ರಗಳು, ಬಣ್ಣದ ಕಾಗದ, ಕತ್ತರಿ, ವೃತ್ತಪತ್ರಿಕೆ, ಅಂಟು | ಪೂರ್ಣ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿ | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಪೂರ್ಣ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ದೇಹದ ಭಾಗಗಳ ಚಿತ್ರಪಟ | ಪೂರ್ಣ | **ಪೂರ್ವ ಸಿದ್ಧತಾ ಚಟುವಟಿಕೆ :** ಹೆಬ್ಬೆರಳ ತೋರ್‌ಬೆರಳ್ ಸೇರಿಕೊಂಡು ಕುಣಿಯುತ್ತಿತ್ತ ತೈಯತಕ್ಕ, ತಕ್ಕ ತೈಯತಕ್ಕ ಅಭಿನಯ ಗೀತೆಯನ್ನು ಹೇಳಿಕೊಡುವರು. | ನಮ್ಮ ಹಲ್ಲುಗಳು | ವಿವಿಧ ರೀತಿಯ ಹಲ್ಲುಗಳನ್ನು ಗುರ್ತಿಸುವರು. ಹಲ್ಲುಗಳ ಕಾರ್ಯ, ಸ್ವಚ್ಛತೆ ಮತ್ತು ರಕ್ಷಣೆಯ ವಿಧಗಳನ್ನು ಅರಿಯುವರು. | ಹಲ್ಲಿನ ಸ್ವಚ್ಛತೆಯ ವಿವಿಧ ಚಿತ್ರಪಟಗಳು | ಪೂರ್ಣ | **ಪೂರ್ವ ಸಿದ್ಧತಾ ಚಟುವಟಿಕೆ :** ಹೆಬ್ಬೆರಳ ತೋರ್‌ಬೆರಳ್ ಸೇರಿಕೊಂಡು ಕುಣಿಯುತ್ತಿತ್ತ ತೈಯತಕ್ಕ, ಈ ತರಗತಿ ಮಕ್ಕಳು ಅಭಿನಯ ಗೀತೆ ಹೇಳಿಕೊಡುವಾಗ ಭಾಗವಹಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಪಾಠಕ್ಕೆ ಅಣಿಯಾಗುವರು. |
| | 25 ನಿ | | | | ಪೂರ್ಣ | ಕೈಕಾಲು ಇಲ್ಲದಿದ್ದರೆ ಆಗುವ ತೊಂದರೆಗಳನ್ನು ಪಟ್ಟಿ ಮಾಡುವರು. | | | | ಪೂರ್ಣ | **ಕಲಿಕಾಂಶ ಚಟುವಟಿಕೆ** ಹಲ್ಲಿನ ಸ್ವಚ್ಛತೆಗೆ ಸಂಬಂಧಿಸಿದಂತೆ ಮಕ್ಕಳು ಈವರೆಗೆ ಅನುಸರಿಸುತ್ತಿರುವ ವಿಧಾನಗಳನ್ನು ಚರ್ಚಿಸುತ್ತಾ ಹಲ್ಲುಗಳ ಸ್ವಚ್ಛತೆ ಬಗ್ಗೆ ಹಾಗೂ ಆರೋಗ್ಯದ ಬಗ್ಗೆ ತಿಳಿಸುವರು. |
| | 10 ನಿ | | | | | ಮಕ್ಕಳು ಮಾಡಿದ ಚಟುವಟಿಕೆಗಳನ್ನು ಪರಿಶೀಲಿಸುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಪೂರ್ಣ | **ಕಲಿಕಾಂಶ ಚಟುವಟಿಕೆ** ಕೈ ಮತ್ತು ಕಾಲುಗಳ ಉಪಯೋಗ ಅವುಗಳಿಲ್ಲದವರಿಗೆ ಎದುರಾಗುವ ತೊಂದರೆಗಳ ಬಗ್ಗೆ ಚರ್ಚಿಸುತ್ತಾ, ಅವುಗಳ ರಕ್ಷಣೆ, ವ್ಯಾಯಾಮ, ಮುಂತಾದವುಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡುವರು. | | | | ವೈಯಕ್ತಿಕ | ಕೋರೆಹಲ್ಲಿನ ಚಿತ್ರ ಬರೆಯುವರು. |
| | 5 ನಿ | | | | | ಕಾಲಿನಿಂದ ಆಡುವ ಆಟಗಳನ್ನು ಪಟ್ಟಿ ಮಾಡಿಕೊಂಡು ಬನ್ನಿ ಎಂದು ಹೇಳುವರು. | | | | | ಹಲ್ಲುಗಳ ಆರೋಗ್ಯಕ್ಕೆ ಸಂಬಂಧಿಸಿದಂತೆ ಯಾವ ಯಾವ ಕ್ರಮಗಳನ್ನು ಕೈಗೊಳ್ಳುವಿರಿ ಪಟ್ಟಿ ಮಾಡಿಕೊಂಡು ಬನ್ನಿ ಎಂದು ಹೇಳುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ನಾಗರ ಹಾವು | ಹಾಡು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು | ಅಂಚೆ ಪತ್ರ ಹಾಡಿನ ಚಾರ್ಟ್ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಅಂಚೆ ಪತ್ರ ಹಾಡು<br>ಅಜ್ಜನೂರಿನಲ್ಲಿ ಎಲ್ಲ ಕುಶಲದಿಂದ ಇರುವರೆ ?<br>ರಜಕ್ ನಾನು ಬರಲಿ ಎಂಬ ಮಾತು ಒತ್ತಿ ಬರೆದರೆ ? \|\|2\|\| | ಕನ್ನಡ ಅಕ್ಕನಿಗೊಂದು ಪತ್ರ | * ಬೇರೆ ಮಕ್ಕಳ ಬರವಣಿಗೆಯನ್ನು ಓದುವರು. | | ಶಿಕ್ಷಕ | **<u>ಪೂರ್ವಸಿದ್ಧತಾ ಚಟುವಟಿಕೆ</u>**<br>2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ನೇರ ಬೋಧನೆಗೆ ಅಣಿಯಾಗಲು ಸೂಚಿಸುವರು. | | | ಕಥೆ ಪುಸ್ತಕಗಳ ಸಂಗ್ರಹ | | ಹಿಂದೆ ಓದಿದ ಕಥೆಯನ್ನು ನೋಟ್‌ಪುಸ್ತಕದಲ್ಲಿ ಬರೆಯಲು ತಿಳಿಸುವರು. |
| | 25 ನಿ | | | | ಶಿಕ್ಷಕ | ನಾಗರ ಹಾವು ಪದ್ಯದಲ್ಲಿನ ಓದಿ–ತಿಳಿ ಮತ್ತು ಅಭ್ಯಾಸ ಚಟುವಟಿಕೆಯನ್ನು ಮಾಡಿಸುವರು ಮತ್ತು ಕಪ್ಪುಹಲಗೆಯಲ್ಲಿ ಬರೆಯುವರು. | | | | ಹಿರೇಮಣಿ | ಹಿರೇಮಣಿ ಸಹಾಯದಿಂದ ಮೇಲಿನ ಚಟುವಟಿಕೆ ಮಾಡುವರು. |
| | 10 ನಿ | | | | | ಹಿರೇಮಣಿ ನೇತೃತ್ವದಲ್ಲಿ ಕಪ್ಪುಹಲಗೆಯಲ್ಲಿ ಬರೆದ ಅಭ್ಯಾಸದ ಉತ್ತರಗಳನ್ನು ಮಕ್ಕಳಿಂದ ಬರೆಸಲು ಸೂಚನೆ ನೀಡುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | ಹಿರೇಮಣಿ ನೇತೃತ್ವದಲ್ಲಿ ಕಪ್ಪುಹಲಗೆಯಲ್ಲಿ ಬರೆದ ಉತ್ತರವನ್ನು ಬರೆದುಕೊಳ್ಳುವರು. | | | ಪಠ್ಯಪುಸ್ತಕ, ವಿವಿಧ ರೀತಿಯ ಅಂಚೆಪತ್ರಗಳು | ಶಿಕ್ಷಕ | **<u>ಕಲಿಕಾಂಶ</u>** ವಿವಿಧ ರೀತಿಯ ಪತ್ರಗಳನ್ನು ಪರಿಚಯಿಸಿ, ಪತ್ರದ ಪ್ರಾರಂಭವನ್ನು ಮಾಡುವ ರೀತಿಯನ್ನು ತಿಳಿಸುವರು. |
| | 5 ನಿ | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು. |
| 2ನೇ | 10 ನಿ | ಗಣಿತ ಸಂಖ್ಯೆಗಳು | ವಸ್ತುಗಳ ಮೂಲಕ ಸರಿ ಸಂಖ್ಯೆ ಬೆಸ ಸಂಖ್ಯೆಗಳನ್ನು ಅರ್ಥಮಾಡಿಕೊಳ್ಳುವರು. | ಹುಣಸೆಬೀಜ, ಮಣಿಗಳು, ಕಡ್ಡಿಗಳು, ಮಕ್ಕಳು, ಬಳೆ, ಬೆಂಕಿಪೊಟ್ಟಣ, ಚೆಂಡು, ಕ್ಯಾಲೆಂಡರ್ | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>**<br>ಕೆರೆ ದಡ ಆಟದ ರೀತಿಯಲ್ಲಿ ಸರಿ ಬೆಸ ಸಂಖ್ಯೆ ಆಟ ಆಡಿಸುವರು. | ಗಣಿತ ಸಂಕಲನ | * ಮೊತ್ತ 999ಕ್ಕೆ ಮೀರದಂತೆ ದಶಕವಿಲ್ಲದ ದಶಕಸಹಿತ ಹಾಗೂ ಮೂರು ಅಂಕಿಗಳನ್ನು ಅಥವಾ ಮೂರು ಸಂಖ್ಯೆಗಳ ಸಂಕಲನ ಮಾಡುವರು.<br>* ನಿತ್ಯ ಜೀವನದ ಸರಳ, ಸಂಕಲನದ ಸಮಸ್ಯೆಗಳನ್ನು ಬಿಡಿಸುವರು. | ಕಡ್ಡಿಗಳು, ಗೋಲಿಗಳು, ಕ.ಹ. ಸಂಖ್ಯಾ ಫಲಕಗಳು | ಶಿಕ್ಷಕ | **<u>ಪೂರ್ವ ಸಿದ್ಧತಾ ಚಟುವಟಿಕೆ :</u>** ಎರಡನೆಯ ತರಗತಿ ಮಕ್ಕಳ ಜೊತೆಯಲ್ಲಿಯೇ ಮೂರನೇ ತರಗತಿ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸಿದ್ಧತೆ ಮಾಡಿಕೊಳ್ಳುವರು. | | | | | ಹಿಂದಿನ ಅವಧಿಯ ಚಟುವಟಿಕೆಯನ್ನು ಮುಂದುವರೆಸಿಕೊಂಡು ಹೋಗಲು ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | **<u>ಕಲಿಕಾಂಶ ಚಟುವಟಿಕೆ :</u>** ಪ.ಪು. ದ ಪುಟಸಂಖ್ಯೆ 59 ರಲ್ಲಿರುವ ಚಿತ್ರಗಳನ್ನು ಅಥವಾ "ಸರಿ-ಬೆಸ ಗುರುತಿಸು" ಈ ಚಟುವಟಿಕೆಯನ್ನು ಮಾಡಿಸುವರು. | | | | ಹಿರೇಮಣಿ | ಶಿಕ್ಷಕರು ಸೂಚಿಸಿದಂತೆ ಮಕ್ಕಳು ಹಿಂದಿನ ಅವಧಿಯ ಚಟುವಟಿಕೆಯನ್ನು ಮುಂದುವರೆಸಿಕೊಂಡು ಹೋಗುವರು. |
| | 40 ನಿ | ಜೀವನ ಶಿಕ್ಷಣ | | | ಶಿಕ್ಷಕ | ಪ್ರಾರ್ಥನಾ ಗೀತೆಯನ್ನು ಹೇಳಿಕೊಡುವುದು ನಂತರ ಯಾವುದಾದರೂ ಕತೆಯನ್ನು ಹೇಳುವರು. | ಜೀವನ ಶಿಕ್ಷಣ | | | ಶಿಕ್ಷಕ | ಪ್ರಾರ್ಥನಾ ಗೀತೆಯನ್ನು ಹೇಳಿಕೊಡುವುದು ನಂತರ ಯಾವುದಾದರೂ ಕತೆಯನ್ನು ಹೇಳುವರು. |

| | | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಜೀವನ ವಿಜ್ಞಾನ ಆಟಗಳು | ಮನೋರಂಜನೆ ಆಟಗಳಲ್ಲಿ ಆಸಕ್ತಿ ಉಂಟುಮಾಡುವುದು | ಮಕ್ಕಳು | ಶಿಕ್ಷಕ | **ಆಟ ಆಡಿಸುವ ಕ್ರಮ :**<br>ತರಗತಿಯಲ್ಲಿರುವ ಮಕ್ಕಳನ್ನು ಎರಡು ಸಮಭಾಗಗಳಾಗಿ ಮಾಡಿ, ಸಾಲಾಗಿ ಎದುರು ಬದುರಾಗಿ ನಿಲ್ಲಿಸುವರು. ಆಟದ ಹೆಸರು, ಕಾಗದ ಎಂದು ತಿಳಿಸುವರು. ಎರಡು ಗುಂಪಿಗೂ ಗುಂಪಿನ ನಾಯಕರನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸುವರು. ಒಂದು ಗುಂಪಿನ ನಾಯಕ ಎಲ್ಲರಿಗೂ ಕಿವಿಯಲ್ಲಿ ಕಲ್ಲು, ಎಂದು ತಿಳಿಸುವನು. ಮತ್ತೊಂದು ಗುಂಪಿನ ನಾಯಕ ಕತ್ತರಿ ಎಂದು ಪಿಸುಮಾತಿನಲ್ಲಿ ತಿಳಿಸುವನು. ಶಿಕ್ಷಕರು ಆಜ್ಞೆ ನೀಡಿ 1,2,3 ಎಂದು ಹೇಳಬೇಕು. ಕಲ್ಲಿನ ಕಡೆಯವರು ಕೈಮುಷ್ಠಿಯನ್ನು ನೀಡುವರು. ಕತ್ತರಿ ಎಂದು ತೋರಿಸಿದವರು ಕತ್ತರಿ ಎಂದು ಹೇಳಿದ ಬೆರಳು ಮುಖಾಂತರ “<” ಆಕಾರದಲ್ಲಿ ತೋರಿಸಿದವರು “Out” ಎಂದು ಒಂದು ಅಂಕ ನೀಡುವುದು. ನಂತರ ಈ ಕೆಳಕಂಡಂತೆ ಪರಿಗಣಿಸುವರು.<br>ತಂಡ –1 — { ಕತ್ತರಿ<br>ತಂಡ –2 — { ಕಾಗದ } ಈ ಸಂದರ್ಭದಲ್ಲಿ ತಂಡ ಒಂದಕ್ಕೆ ಒಂದು ಅಂಕ<br>ತಂಡ –1 — { ಕಾಗದ<br>ತಂಡ –2 — { ಕಲ್ಲು } ಈ ಸಂದರ್ಭದಲ್ಲಿ ಕಾಗದ ಎಂದು ತಿಳಿಸಿದ ತಂಡಕ್ಕೆ ಒಂದು ಅಂಕ<br>ಇಲ್ಲಿ ಕಲ್ಲನ್ನು ಕಾಗದದಿಂದ ಮಡಚಿಟ್ಟುಕೊಳ್ಳಬಹುದು ಎಂಬುದಾಗಿ ತಿಳಿಸುವರು. ಈ ರೀತಿಯ ಮನೋರಂಜನಾ ಆಟಗಳನ್ನು ಆಡಿಸುವರು. | ಜೀವನ ವಿಜ್ಞಾನ ಆಟಗಳು | ಮನೋರಂಜನೆ ಆಟಗಳಿಂದ ಆಸಕ್ತಿ ಕೆರಳಿಸುವರು. | ಮಕ್ಕಳು | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿ | ರೇಡಿಯೋ, ಕಪ್ಪುಹಲಗೆ, ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ರೇಡಿಯೋ ಕಾರ್ಯಕ್ರಮ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | | 2ನೇ ತರಗತಿಯ ಮಕ್ಕಳ ಜೊತೆ ರೇಡಿಯೋ ಕಾರ್ಯಕ್ರಮದಲ್ಲಿ ತೊಡಗಿಸುವರು. |
| 4ನೇ | 10 ನಿ | ಪರಿಸರ ಅಧ್ಯಯನ ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವುದು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಪಠ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>‘ಹೆಬ್ಬೆರಳ ತೋರ್‌ಬೆರಳ್ ಸೇರಿಕೊಂಡು ಕುಣಿಯುತ್ತಿತ್ತ ತೈಯತಕ್ಕ, ತಕ್ಕ ತೈಯತಕ್ಕ’ ಅಭಿನಯ ಗೀತೆಯನ್ನು ಹೇಳಿಕೊಡುವರು. | ಪರಿಸರ ಅಧ್ಯಯನ ನಮ್ಮ ಹಲ್ಲುಗಳು | ವಿವಿಧ ರೀತಿಯ ಹಲ್ಲುಗಳನ್ನು ಗುರ್ತಿಸುವುದು. ಹಲ್ಲುಗಳ ಕಾರ್ಯ, ಸ್ವಚ್ಛತೆ ಮತ್ತು ರಕ್ಷಣೆಯ ವಿಧಗಳನ್ನು ಅರಿಯುವುದು | ಪಠ್ಯಪುಸ್ತಕ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಹೆಬ್ಬೆರಳ ತೋರ್‌ಬೆರಳ್ ಸೇರಿಕೊಂಡು ಕುಣಿಯುತ್ತಿತ್ತ ತೈಯತಕ್ಕ, ಈ ಅಭಿನಯ ಗೀತೆಯನ್ನು ಜೊತೆಯಾಗಿ ಸೇರಿಕೊಂಡು ಹಾಡುವರು. |
| | 5 ನಿ | | | | | ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | ಪುಟ ಸಂಖ್ಯೆ 31 ರಲ್ಲಿರುವ ತಿಳಿ ಕಲಿ ವಿಭಾಗದ ‘ಯೋಚಿಸಿ ಉತ್ತರ ಬರೆ’ ಚಟುವಟಿಕೆಯನ್ನು ಮಾಡಿಸುವರು. | | | | ಹಿರೇಮಣಿ | ಪು.ಸಂ. 44 ರಲ್ಲಿರುವ ನಿನಗಿದು ಗೊತ್ತೇ ನಕಲು ಮಾಡಿಸುವರು. |
| | 10 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆಯನ್ನು ನೀಡುವರು. | | | | | ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | ಬೆರಳಿನ ಮುದ್ರೆಯಿಂದ ರಚಿಸಿದ ಚಿತ್ರದ ಚಾರ್ಟ್ | ಹಿರೇಮಣಿ | ಬೆರಳಿನ ಮುದ್ರೆಯಿಂದ ರಚಿಸಿದ ಚಿತ್ರವನ್ನು ನೋಡಿ. ಚಿತ್ರ ಬರೆಯಲು ಗುಂಪು ಚಟುವಟಿಕೆ ನೀಡುವರು. | | | | ಶಿಕ್ಷಕ | <u>ಪುನರ್ಬಲನ</u> ಪು.ಸಂ. 44 ಹಾಗೂ 45 ರಲ್ಲಿರುವ ತಿಳಿ ಕಲಿ ವಿಭಾಗದ 4 ಪ್ರಶ್ನೆಗಳಿಗೆ ಉತ್ತರ ಬರೆಸುವರು. |
| | 5 ನಿ | | | | | ಮಕ್ಕಳು ಮಾಡಿದ ಚಟುವಟಿಕೆಯನ್ನು ಪರಿಶೀಲಿಸುವರು. | | | | | ಪು. ಪಂ. 45 ರಲ್ಲಿರುವ ಬಿಟ್ಟು ಸ್ಥಳ ಭರ್ತಿ ಮಾಡಲು ತಿಳಿಸುವರು. |

| ಅವಧಿ | ಸಮಯ ನಿಮಿಷ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ | ಮೂರನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ವಿಧಾನ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1ನೇ | 10 ನಿ | ಕನ್ನಡ ಹಾವಿನ ಹಾಡು | ಹಾಡು ಮತ್ತು ಚಿತ್ರಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವರು | ಅಂಚೆ ಪತ್ರ_ಹಾಡಿನ ಚಾರ್ಟ್ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಅಂಚೆ ಪತ್ರದ ಹಾಡನ್ನು ಪೂರ್ತಿಯಾಗಿ ಪುನರಾವರ್ತಿಸುವರು. | ಕನ್ನಡ ಅಕ್ಷರಗೊಂಡು ಚಿತ್ರ | ಬೇರೆ ಮಕ್ಕಳ ಬರವಣಿಗೆಯನ್ನು ಓದುವರು | | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 5 ನಿ | | | | | ನೇರ ಬೋಧನೆಗೆ ಅಣಿಯಾಗುವರು. | | | | | ಕಪ್ಪುಹಲಗೆಯಲ್ಲಿ ಮೇಲೆ ಕೆಲವು ವಾಕ್ಯಗಳನ್ನು ಬರೆದು ಮಕ್ಕಳಿಂದ ನಕಲು ಮಾಡಲು ತಿಳಿಸುವರು. |
| | 25 ನಿ | | | | ಶಿಕ್ಷಕ | **ಪುನರ್ಬಲನ ಚಟುವಟಿಕೆ** ಪಾಠದಲ್ಲಿರುವ ಅಭ್ಯಾಸ ಚಟುವಟಿಕೆಯನ್ನು ಶಿಕ್ಷಕರು ಮಕ್ಕಳಿಂದ ಮಾಡಿಸುವರು. | | | | ಹಿರೇಮಣಿ | ಹಿರೇಮಣಿ ಮಾರ್ಗದರ್ಶನದಲ್ಲಿ ಮಕ್ಕಳು ವಾಕ್ಯಗಳನ್ನು ನಕಲು ಮಾಡುವರು. |
| | 5 ನಿ | | | | | ಶಿಕ್ಷಕರು ಕರಿಹಲಗೆಯಲ್ಲಿ ಈಗಾಗಲೇ ಚಿತ್ರಿಸಿದ ಹಾವಿನ ಚಿತ್ರವನ್ನು ಮಕ್ಕಳಿಂದ ನಕಲು ಮಾಡಲು ಹಿರೇಮಣಿಗೆ ಸೂಚಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| | 25 ನಿ | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಕಪ್ಪುಹಲಗೆಯಲ್ಲಿ ಚಿತ್ರಿಸಿದ ಹಾವಿನ ಚಿತ್ರವನ್ನು ನಕಲು ಮಾಡುವರು. | | | | ಶಿಕ್ಷಕ | **ಕಲಿಕಾಂಶ ಚಟುವಟಿಕೆ** : ಕಪ್ಪುಹಲಗೆಯಲ್ಲಿ ಬರೆದ ವಾಕ್ಯವನ್ನು ಪ್ರತೀ ಶಿಕ್ಷಕಿಯು ಓದಿಸುವರು. |
| | 10 ನಿ | | | | | ಮೇಲಿನ ಚಟುವಟಿಕೆಯನ್ನು ಶಿಕ್ಷಕರು ಪರಿಶೀಲಿಸುವರು. | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. |
| 2ನೇ | 10 ನಿ | ಪರಿಸರ ಅಧ್ಯಯನ ನಮ್ಮ ದೇಹದ ಭಾಗಗಳು | ದೇಹದ ಅಂಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | ಹಾಡಿನ ಚಾರ್ಟ್ | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :** ಹಕ್ಕಿ ಚಿಲಿಪಿಲಿ, ಗಿಲ್ಕಿ ಗಿಲಿ ಗಿಲಿ ಅಭಿನಯ ಗೀತೆಯನ್ನು ಹೇಳಿಕೊಡುವುದು ('ಚಿಗುರು' ಧ್ವನಿ ಸುರುಳಿಯಲ್ಲಿದೆ.) | | | | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆಯಲ್ಲಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 5 ನಿ | | | | | ಮುಂದಿನ ಚಟುವಟಿಕೆಗೆ ಸೂಚನೆ ನೀಡುವರು. | | | | | ಮಕ್ಕಳು ಮುಂದಿನ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ಹಿರೇಮಣಿ | ನೆಲದ ಮೇಲೆ ಪಾದ ಇಟ್ಟು ಆಕಾರ ಬರೆಯುವ ಚಟುವಟಿಕೆ ಮಾಡುವರು. | | | ಪಠ್ಯಪುಸ್ತಕ | ಶಿಕ್ಷಕ | ಕಠಿಣ ಪದಗಳಿಗೆ ಉಕ್ತಲೇಖನ ನೀಡುವರು ಹಾಗೂ ಪರಿಶೀಲಿಸಿ ತಪ್ಪನ್ನು ತಿದ್ದುವರು. |
| | 10 ನಿ | | | | | ನೀಡಿದ್ದ ಚಟುವಟಿಕೆಗಳನ್ನು ಪರಿಶೀಲನೆ ಮಾಡುವರು. ಹಾಗೂ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳುವರು. | ಕನ್ನಡ ಅಕ್ಷರಗೊಂಡು ಚಿತ್ರ | ಬೇರೆ ಮಕ್ಕಳ ಬರವಣಿಗೆಯನ್ನು ಓದುವರು | ಮಕ್ಕಳ ಕೈ ಬರಹದ ಪ್ರತಿಗಳು | | ಕೈಬರಹದ ಪ್ರತಿಗಳನ್ನು ಓದಿಸಲು ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | ಪು.ಸಂಖ್ಯೆ 31 ರಲ್ಲಿರುವ ಈ ಪ್ರಶ್ನೆಗಳಿಗೆ ಉತ್ತರ ಹೇಳು ವಿಭಾಗವನ್ನು ಮೌಖಿಕವಾಗಿ ಕೇಳುವರು. | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮಕ್ಕಳು ಕೈಬರಹದ ಪತ್ರಗಳನ್ನು ಓದುವರು. |
| | 5 ನಿ | | | | ಶಿಕ್ಷಕ | ಪಠ್ಯಪುಸ್ತಕ ಪು.ಸಂಖ್ಯೆ 32 ರಲ್ಲಿರುವ ಖಾಲಿ ಜಾಗದಲ್ಲಿ ಎಡಗೈ ಇಟ್ಟು ಪೆನ್ಸಿಲ್ಲಿನ ಸಹಾಯದಿಂದ ಮುಂಗೈ ಮತ್ತು ಬೆರಳುಗಳ ಆಕಾರ ಬರೆದುಕೊಂಡು ಬರಲು ತಿಳಿಸುವರು. | | | | | ನಿಮ್ಮ ಸ್ನೇಹಿತರು ಬರೆದಿರುವಂತಹ ಪತ್ರಗಳನ್ನು ಓದಿರಿ ಎಂದು ಹೇಳುವರು. |

| ಅವಧಿ | ಸಮಯ ಹಂಚಿಕೆ | ಎರಡನೇ ತರಗತಿ | | | | | ಮೂರನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಬೋಧನಾ ಕಲಿಕಾ ಸಾಮಗ್ರಿಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3ನೇ | 40 ನಿ | ಸಾ.ಉ.ಉ.ಕಾ | ನಿರುಪಯುಕ್ತವೆಂದು ತಿಳಿದ ಕಸಕಡ್ಡಿಗಳನ್ನು ಗೊಬ್ಬರವಾಗಿ ಪರಿವರ್ತಿಸುವ ವಿಧಾನವನ್ನು ತಿಳಿಸುವರು. | ಕಸಕಡ್ಡಿ, ಗುದ್ದಲಿ, ಪೊರಕೆ, ನೀರು | ಶಿಕ್ಷಕ | ಕಾಂಪೋಸ್ಟ್ ಗೊಬ್ಬರ ತಯಾರು ಮಾಡುವುದನ್ನು ಮಕ್ಕಳಿಗೆ ತಿಳಿಸುವರು. ಶಾಲಾವರಣದಲ್ಲಿ ಬಿದ್ದಿರುವ ಎಲೆಗಳು, ಕಸಗಳನ್ನು ಗುಂಡಿಯಲ್ಲಿ ಹಾಕಿಸುವುದು ನಂತರ ಮಣ್ಣನ್ನು ಹಾಕಿ ನೀರನ್ನು ಹಾಕಿ, 15 ದಿನಗಳ ನಂತರ ಗೊಬ್ಬರವಾಗಿ ಪರಿವರ್ತಿತವಾಗುವ ಚಟುವಟಿಕೆ ಮಾಡಿಸುವರು. | ಸಾ.ಉ.ಉ.ಕಾ | ನಿರುಪಯುಕ್ತವೆಂದು ತಿಳಿದ ಕಸಕಡ್ಡಿಗಳನ್ನು ಗೊಬ್ಬರವಾಗಿ ಪರಿವರ್ತಿಸುವ ವಿಧಾನವನ್ನು ತಿಳಿಸುವರು. | ಕಸಕಡ್ಡಿ, ಗುದ್ದಲಿ, ಪೊರಕೆ, ನೀರು | ಶಿಕ್ಷಕ | 2ನೇ ತರಗತಿಯ ಮಕ್ಕಳ ಜೊತೆ 3ನೇ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. |
| | 40 ನಿ | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | ಶಿಕ್ಷಕ | ಚಿನ್ನರ ಚುಕ್ಕಿ ರೇಡಿಯೋ ಕಾರ್ಯಕ್ರಮ | ಚಿನ್ನರ ಚುಕ್ಕಿ | | ರೇಡಿಯೋ, ಕಪ್ಪುಹಲಗೆ, ಸೀಮೆಸುಣ್ಣ | | 2ನೇ ತರಗತಿಯ ಮಕ್ಕಳ ಜೊತೆ ಈ ತರಗತಿಯ ಮಕ್ಕಳು ರೇಡಿಯೋ ಕಾರ್ಯಕ್ರಮದಲ್ಲಿ ತೊಡಗಿಸುವರು. |
| 4ನೇ | 40 ನಿ | ಮೌಲ್ಯ ಶಿಕ್ಷಣ | ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವರು. | ಒಗಟುಗಳು ಇರುವ ಪುಸ್ತಕ | ಶಿಕ್ಷಕ | 3ನೇ ತರಗತಿಯ ಮಕ್ಕಳ ಜೊತೆಯಲ್ಲಿ ಈ ತರಗತಿಯ ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸುವರು. | ಜೀವನ ಕೌಶಲ | ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವರು. | ಒಗಟುಗಳು ಇರುವ ಪುಸ್ತಕ | ಶಿಕ್ಷಕ | ಗಾದೆಗಳನ್ನು ಕಪ್ಪುಹಲಗೆಯ ಮೇಲೆ ಬರೆಯುವರು.<br>1. ಮೂರು ಮಂದಿ ಅಕ್ಕತಂಗಿಯರು ಕೆರೆಗೆ ಬಿದ್ದರು, ಒಬ್ಬಳು ಮುಳುಗಿದಳು, ಒಬ್ಬಳು ತೇಲಿದಳು, ಇನ್ನೊಬ್ಬಳು ಕರಗಿ ಹೋದಳು<br>**ಉತ್ತರ :** ಎಲೆ, ಅಡಿಕೆ, ಸುಣ್ಣ<br>2. ಬಿಟ್ಟರೆ ಚೊಯ್ ಅನ್ನುತ್ತೆ, ಮೈಯೆಲ್ಲಾ ತೂತು, ಹೊಟ್ಟೆಗೆ ತಿನ್ನೋದು<br>**ಉತ್ತರ :** ದೋಸೆ<br>ಹೀಗೆ ಗಾದೆಗಳ ಸಂಗ್ರಹ ಮಾಡಿಕೊಂಡು ಮಕ್ಕಳು ಸಮಸ್ಯೆಗೆ ಹುಡುಕುವ ಪರಿಹಾರ ಚಟುವಟಿಕೆಯನ್ನು ಮಾಡಿಸುವರು. |
| | 40 ನಿ | ಜೀವನ ವಿಜ್ಞಾನ ರಂಗಕಲೆ ಸಂಗೀತ | ಸಂಗೀತದ ಕಡೆ ಆಸಕ್ತಿ ಮೂಡಿಸುವರು. | ಧ್ವನಿಸುರುಳಿ ಆರ್.ಸಿ.ಸಿ.ಪಿ. ಬಳಸುವರು. | ಶಿಕ್ಷಕ | ಮಕ್ಕಳಿಗೆ ಪ್ರಾಣಿಗಳ ಪರಿಚಯ ಇರುವುದರಿಂದ ಅವುಗಳ ಕೂಗುಗಳು ಪರಿಚಯಿಸುವರು. ಶಾಲೆಯಲ್ಲಿ ದೊರೆಯುವ ಧ್ವನಿಸುರುಳಿ ಬಳಸಿ ಪ್ರಾಣಿ ಪಕ್ಷಿಗಳ ಕೂಗುಗಳನ್ನು ಅನುಕರಣೆ ಮಾಡುವಂತೆ ಮಕ್ಕಳಿಗೆ ಹೇಳುವರು. ಒಂದೊಂದು ಪ್ರಾಣಿ ಪಕ್ಷಿಯೂ ಒಂದೊಂದು ಧ್ವನಿಯಲ್ಲಿ ಕೂಗುವುದರಿಂದ ಆ ಧ್ವನಿಯ ವಿಶಿಷ್ಟತೆಯನ್ನು ಪರಿಚಯಿಸುವುದರ ಮೂಲಕ ಶೃತಿಯ ಪರಿಕಲ್ಪನೆ ಮೂಡಿಸುವರು. | ಜೀವನ ವಿಜ್ಞಾನ ರಂಗಕಲೆ ಸಂಗೀತ | ಸಂಗೀತದ ಕಡೆ ಆಸಕ್ತಿ ಮಾಡಿಸುವರು. | ಧ್ವನಿಸುರುಳಿ ಆರ್.ಸಿ.ಸಿ.ಪಿ. ಬಳಸುವರು. | | 2ನೇ ತರಗತಿಯ ಮಕ್ಕಳ ಜೊತೆಗೂಡಿಸಿಕೊಂಡು ಈ ತರಗತಿಯ ಮಕ್ಕಳು ಪ್ರಾಣಿಗಳ ಕೂಗುಗಳನ್ನು ಪರಿಚಯ ಮಾಡಿಸುವ ಚಟುವಟಿಕೆಯಲ್ಲಿ ತೊಡಗಿಸುವರು. |